ವರ್ಗಾವಣೆಯಿಂದ ಆಡಳಿತಾತ್ಮಕ ಹಾಗೂ ಅಭಿವೃದ್ಧಿ ಕಾರ್ಯಗಳಿಗೆ ತೊಡಕು ಆಗಿರುವುದಿಲ್ಲ.

ಉದ್ಭವಿಸುವುದಿಲ್ಲ.

ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಅಕ್ಟೋಬರ್ 1999ರ ನಂತರ ಡಿ. ನೋಟಿಫಿಕೇಷನ್ ಮೂಲಕ ಭೂಸ್ವಾಧೀನ

305(341) - ಶ್ರೀ ಚಲುವರಾಯಸ್ವಾಮಿ ಎನ್. (ನಾಗಮಂಗಲ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಅಕ್ಟೋಬರ್ 1999ರ ನಂತರ ಎಷ್ಟು ಎಕರೆ ಜಮೀನಿಗೆ ನೋಟಿಫಿಕೇಷನ್ ಮಾಡಿ, ಎಷ್ಟು ಜಮೀನನ್ನು ಭೂ ಸ್ವಾಧೀನ ಪಡಿಸಿಕೊಳ್ಳಲಾಗಿದೆ?

ಆ) ಇನ್ನು ಮುಂದೆಯೂ ಭೂಸ್ವಾದೀನಪಡಿಸಿಕೊಳ್ಳಲಾಗುವುದೇ?

ಶ್ರೀ ಎಸ್. ಎಂ. ಕೃಷ್ಣ (ಮುಖ್ಯಮಂತ್ರಿಗಳು):

ಅ) 773 ಎಕರೆ - 23 ಗುಂಟೆ ಜಮೀನು ಡಿನೋಟಿಫಿಕೇಷನ್ ಆಗಿರುತ್ತದೆ. 2629 ಎಕರೆ - 30 ಗುಂಟೆ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳಲಾಗಿದೆ.

ಆ) ಹೌದು.

ಮಂಡ್ಯ ಜಿಲ್ಲೆಯಲ್ಲಿ ಹೊಸ ಡಿಸ್ಟಲರಿಗೆ ಪರವಾನಗಿ

306(346) - ಶ್ರೀ ಚಲುವರಾಯಸ್ವಾಮಿ ಎನ್. (ನಾಗಮಂಗಲ): ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ಜಿಲ್ಲೆಯಲ್ಲಿ ಯಾವುದಾದರೂ ಹೊಸ ಡಿಸ್ಟಲರಿ (ಮದ್ಯಸಾರ ಘಟಕ) ತೆರೆಯಲು ಪರವಾನಗಿ ನೀಡಲಾಗಿದೆಯೇ? ಅಥವಾ ನೀಡುವ ಉದ್ದೇಶವಿದೆಯೇ:

ಆ) ಇದ್ದರೆ ಯಾವ ತಾಲ್ಲೂಕಿಗೆ ಯಾವ ಸಂಸ್ಥೆಗೆ ಪರವಾನಗಿ ನೀಡಲಾಗುವುದು ಎಂಬುದರ ಬಗ್ಗೆ ಮಾಹಿತಿ ಒದಗಿಸುವುದು:

ಶ್ರೀ ಎಂ.ಎಂ. ನಾಣಯ್ಯ (ಅಬಕಾರಿ ರಾಜ್ಯ ಸಚಿವರು):

ಅ) ಕಾಕಂಬಿಯಿಂದ ಮದ್ಯಸಾರ ಉತ್ಪಾದಿಸಲು ಒಂದು ಪ್ರಾಥಮಿಕ ಡಿಸ್ಟಲರಿ ಸನ್ನದು ನೀಡಲಾಗಿದೆ.

ಆ) ಮೆ: ಚಾಮುಂಡೇಶ್ವರಿ ಶುಗರ್ಸ್ ಲಿಮಿಟೆಡ್. ಭಾರತೀನಗರ. ಕೆ.ಎಂ. ದೊಡ್ಡಿ. ಮದ್ದೂರು ತಾಲ್ಲೂಕು ಮಂಡ್ಯ ಜಿಲ್ಲೆ ಇವರಿಗೆ ದಿನಾಂಕ 27-09-2001 ರಂದು ಪ್ರಾಥಮಿಕ ಡಿಸ್ಟಲರಿ ಸನ್ನದನ್ನು ನೀಡಲಾಗಿದೆ.